## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2012-13ನೇ ಸಾಲಿನ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಯ ಅವಧಿಯನ್ನು ವಿಸ್ತರಿಸಿ ತರಬೇತಿ ಶುಲ್ಕ ಹಾಗೂ ಮಾಸಿಕ ಶಿಷ್ಯವೇತನವನ್ನು ನಿಗದಿ ಪಡಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ 312 ಬಿಎಂಎಸ್ 2011, ಬೆಂಗಳೂರು, ದಿನಾಂಕ: 26.03.2012.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಏಕ ಕಡತದಲ್ಲಿ ಸಲ್ಲಿಸಿರುವ ಪ್ರಸ್ತಾವನೆ ಸಂಖ್ಯೆ: ಸಂಖ್ಯೆ: ಹಿಂವಕನಿ/ತರಬೇತಿCR-6/IAS/IPS/2012-13, ದಿನಾಂಕ: 02.05.2013

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಸರ್ಕಾರಿ ಆದೇಶದಲ್ಲಿ ದೆಹಲಿ, ಹೈದರಾಬಾದ್ ಹಾಗೂ ಬೆಂಗಳೂರಿನ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಲ್ಲಿ ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಗಾಗಿ ಅರ್ಹ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ನಿಯೋಜಿಸುವ ಬಗ್ಗೆ ತರಬೇತಿ ಶುಲ್ಕ ಹಾಗೂ ಶಿಷ್ಯವೇತನವನ್ನು ನಿಗದಿಪಡಿಸಿ ಆದೇಶಿಸಲಾಗಿದೆ. ಅದರಂತೆ 2012-13ನೇ ಸಾಲಿನಲ್ಲಿ 6 ತಿಂಗಳ ಪರೀಕ್ಷಾ ಪೂರ್ವ ತರಬೇತಿಯನ್ನು ಹಿಂದುಳಿದ ವರ್ಗಗಳ 89 ಅಭ್ಯರ್ಥಿಗಳು ನವಂಬರ್ 2012 ರಿಂದ ಏಪ್ರಿಲ್ 2013 ರವರೆಗೆ ಪಡೆದಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು, 2013 ರಲ್ಲಿ ಕೇಂದ್ರ ಲೋಕ ಸೇವಾ ಆಯೋಗವು ಸ್ಪರ್ಧಾತ್ಮಕ ಪರೀಕ್ಷಾ ವಿಧಾನವನ್ನು ಬದಲಾಯಿಸಿರುವ ಕಾರಣ ತರಬೇತಿ ಸಂಸ್ಥೆಗಳು ಹಾಗೂ ತರಬೇತಿಗೆ ನಿಯೋಜಿಸಲ್ಪಟ್ಟ ಅಭ್ಯರ್ಥಿಗಳು General Studies ನಲ್ಲಿ increased syllabus ಗೆ 3 ತಿಂಗಳ ಹೆಚ್ಚುವರಿ ತರಬೇತಿಯನ್ನು ಪ್ರಾಯೋಜಿಸಲು ಕೋರಿರುತ್ತಾರೆ. ಆದ್ದರಿಂದ 2012-13ನೇ ಸಾಲಿನಲ್ಲಿ ಈಗಾಗಲೇ 6 ತಿಂಗಳ ಪರೀಕ್ಷಾ ಪೂರ್ವ ತರಬೇತಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ 89 ಅಭ್ಯರ್ಥಿಗಳಿಗೆ ಜೂನ್ 2013 ರಿಂದ ಆಗಸ್ಟ್ 2013 ರ ವರೆಗೆ ಹೆಚ್ಚುವರಿ ತರಬೇತಿಯನ್ನು ನೀಡುವುದು ಸೂಕ್ತವೆಂದು, ತರಬೇತಿ ಸಂಸ್ಥೆಗಳು ಐಚ್ಛಿಕ ವಿಷಯವೊಂದಕ್ಕೆ ನಿಗದಿಪಡಿಸಿರುವ ಕನಿಷ್ಠ ಬೋಧನಾ ಶುಲ್ಕವನ್ನು 3 ತಿಂಗಳ ತರಬೇತಿ ಶುಲ್ಕವನ್ನಾಗಿ ನಿಗದಿಪಡಿಸುವ ಹಾಗೂ ಮಾಸಿಕ ಶಿಷ್ಯವೇತನವನ್ನು ಹೆಚ್ಚಿಸುವ ಬಗ್ಗೆ ಏಕಕಡತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹಿಂವಕ 368 ಬಿಎಂಎಸ್ 2013, ದಿನಾಂಕ: 03.05.2013**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2013 ರಲ್ಲಿ ಕೇಂದ್ರ ಲೋಕಸೇವಾ ಆಯೋಗವು ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ವಿಧಾನವನ್ನು ಬದಲಾಯಿಸಿರುವ ಕಾರಣ, General Studies ನಲ್ಲಿ increased syllabus ಗೆ ಜೂನ್ 2013 ರಿಂದ ಆಗಸ್ಟ್ 2013 ರ ವರೆಗೆ ಹೆಚ್ಚುವರಿ ತರಬೇತಿಯನ್ನು ಈಗಾಗಲೇ ಸರ್ಕಾರವು 2012-13ನೇ ಸಾಲಿಗೆ ನಿಗದಿಪಡಿಸಿರುವ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ ನೀಡಲು ಹಾಗೂ ಬೋಧನಾ ಶುಲ್ಕ ಹಾಗೂ ಮಾಸಿಕ ಶಿಷ್ಯವೇತನವನ್ನು ನಿಗದಿಪಡಿಸಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಆದೇಶಿಸಿದೆ.

(In Rupees)

| Sl. No. | Name of the Training Institution | Number of sponsored candidates | Course fee (from June 2013 to August 2013) | Monthly Stipend | Remarks |
|---|---|---|---|---|---|
| 1. | Vajiram & Ravi, New Delhi | 20 | 25,000 | 8,000 | |
| 2. | A.L.S. New Delhi | 19 | 25,000 | 8,000 | |
| 3. | Brain Tree, Hyderabad | 11 | 20,000 | 6,000 | |
| 4. | R.C. Reddy, Hyderabad | 14 | 20,000 | 6,000 | |
| 5. | U.C.C. Bangalore | 25 | 10,000 | 4,000 | For outsiders |
| | | | | 2,000 | Local Candidates (Bengaluru Urban) |
| | Total | **89** | | | |

ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತಗಲುವ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ರಾಜ್ಯ ವಲಯ ಯೋಜನೆ ಲೆಕ್ಕ ಶೀರ್ಷಿಕೆ: 2225-03-277-2-08 ಆಬ್ಜೆಕ್ಟಿವ್ ಕೋಡ್ 059 ರಡಿ ಭರಿಸತಕ್ಕದ್ದು.

ಷರತ್ತುಗಳು:

1. 2012-13ನೇ ಸಾಲಿನಲ್ಲಿ ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ 6 ತಿಂಗಳ ಪೂರ್ವಭಾವಿ ತರಬೇತಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿಯೋಜಿಸಲ್ಪಟ್ಟು, ತರಬೇತಿಯನ್ನು ಪೂರ್ಣಗೊಳಿಸಿದ 89 ಅಭ್ಯರ್ಥಿಗಳು ಮಾತ್ರ ಈ ಹೆಚ್ಚುವರಿ ತರಬೇತಿಗೆ ಅರ್ಹರಾಗಿರುತ್ತಾರೆ.

2. ವಿಸ್ತರಿಸಿದ ಅವಧಿಗೆ ತರಬೇತಿಯ ಷರತ್ತುಗಳನ್ನೊಳಗೊಂಡ ಕರಾರು ಒಪ್ಪಂದವನ್ನು ತರಬೇತಿ ಸಂಸ್ಥೆಗಳೊಂದಿಗೆ ಮಾಡಿಕೊಳ್ಳತಕ್ಕದ್ದು.

3. ಕೇಂದ್ರ ಲೋಕಸೇವಾ ಆಯೋಗವು 2013 ರಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ವಿಧಾನವನ್ನು ಬದಲಾಯಿಸಿರುವ ಕಾರಣ General Studies ನಲ್ಲಿ increased syllabus ಗೆ 3 ತಿಂಗಳ ಹೆಚ್ಚುವರಿ ತರಬೇತಿ (ಜೂನ್ 2013 ರಿಂದ ಆಗಸ್ಟ್ 2013 ರ ವರೆಗೆ) ಯನ್ನು ನೀಡತಕ್ಕದ್ದು.

4. ತರಬೇತಿ ಸಂಸ್ಥೆಗಳು ನಿಯಮಿತವಾಗಿ ಅಭ್ಯರ್ಥಿಗಳ ಹಾಜರಾತಿ ಮತ್ತು ಪ್ರಗತಿ ವರದಿಯನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸತಕ್ಕದ್ದು.

5. ತರಬೇತಿ ಸಂಸ್ಥೆಗಳಿಗೆ ತರಬೇತಿಯು ಸಂಪೂರ್ಣಗೊಂಡ ಬಳಿಕ ತರಬೇತಿ ಶುಲ್ಕವನ್ನು ಪಾವತಿಸತಕ್ಕದ್ದು.

6. ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನವನ್ನು NEFT ಮೂಲಕ ಆಯಾ ಅಭ್ಯರ್ಥಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡತಕ್ಕದ್ದು.

7. ಶಿಷ್ಯವೇತನವನ್ನು ನೀಡುವಾಗ ಅಭ್ಯರ್ಥಿಗಳ ಹಾಜರಾತಿಯನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಒಂದು ತಿಂಗಳ ತರಬೇತಿ ಅವಧಿಯಲ್ಲಿ 3 ದಿನಗಳಿಗಿಂತ ಹೆಚ್ಚಿನ ಅವಧಿಗೆ ಅಭ್ಯರ್ಥಿಯು ಗೈರು ಹಾಜರಾದಲ್ಲಿ, ಆ ಅವಧಿಗೆ ಶಿಷ್ಯವೇತನವನ್ನು ಪಾವತಿಸತಕ್ಕದ್ದಲ್ಲ.

8. ತರಬೇತಿ ಅವಧಿಯಲ್ಲಿ ತರಬೇತಿಗೆ ನಿಯೋಜಿಸಲ್ಪಟ್ಟ ಸ್ಥಳಕ್ಕೆ ಒಂದು ಬಾರಿ ಹೋಗಿ ಬರಲು ದ್ವಿತೀಯ ದರ್ಜೆ (ಸ್ಲೀಪರ್) ರೈಲ್ವೇ ಪ್ರಯಾಣ ವೆಚ್ಚವನ್ನು ಅಭ್ಯರ್ಥಿಗಳಿಗೆ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಲ್.ಜಿ.ಮುಳಕೂರ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

6/5

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.